**ಸಿವಿಲ್ ಜಡ್ಜ್ ಹಾಗೂ ಪ್ರ.ದ.ನ್ಯಾ.ದಃ ನ್ಯಾಯಾಲಯಃ ಶೃಂಗೇರಿ**

**ಸಿ.ಸಿ ಸಂಖ್ಯೆ ::270/2022**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ಪಣೇಶ | **PW-5** |
| **ತಂದೆಯ ಹೆಸರು** | : | ಚಂದ್ರಶೇಖರ | **CW-6** |
| **ವಯಸ್ಸು** | : | 42 | |
| **ಉದ್ಯೋಗ** | : | ಕೃಷಿ | |
| **ವಾಸಸ್ಥಳ** | : | ಮೀಗ | |

**ದಿನಾಂಕಃ13-02-2026 ರಂದು ಪ್ರಮಾಣವಚನ ಬೋಧಿಸಲಾಯಿತು.**

**:: ಮುಖ್ಯ ವಿಚಾರಣೆ :: A.P.P ರವರಿಂದ ::**

1. ನನಗೆ ಈ ಪ್ರಕರಣದಲ್ಲಿ ಯಾವುದೇ ಮಾಹಿತಿ ಇಲ್ಲ. ಪೋಲಿಸರು ಹೇಳಿದ್ದರಿಂದ ನಾನು ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ನನಗೆ ಸದರಿ ದಾಖಲೆಯಲ್ಲಿ ಏನು ಬರೆದಿದೆ ಎಂದು ತಿಳಿದಿರುವುದಿಲ್ಲ. ನಾನು ಸದರಿ ದಾಖಲೆಗೆ ಶುಭೋದಯ ಲಾಡ್ಜ್ ಬಳಿ ಸಹಿ ಮಾಡಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**::ಪಾಟೀಸವಾಲು :: A P P ರವರಿಂದ ::**

ದಿಃ04-04-2018 ರಂದು ನಾನು ಸ್ಥಳ ಮಹಜರ್ ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಮೂಲ ದಾಖಲೆಯಲ್ಲಿರುವ ಸ್ಥಳ ಮಹಜರ್ ಅನ್ನು ತೋರಿಸಿ ಅದರಲ್ಲಿರುವ ಸಹಿಯ ಬಗ್ಗೆ ಕೇಳಲಾಗಿ ಸಾಕ್ಷಿಯು ಸದರಿ ಸಹಿಯನ್ನು ನೋಡಿ ಒಪ್ಪಿರುತ್ತಾರೆ. ಸದರಿ ಸಹಿ ಈಗಾಗಲೇ ನಿಪಿ-11(ಬಿ) ಎಂದು ಗುರುತಿಸಲಾಗಿರುತ್ತದೆ. ನನಗೆ ಸದರಿ ಮೂಲ ಕಡತದಲ್ಲಿರುವ ಈಗಾಗಲೇ ನಿಶಾನೆ ಗೊಂಡಿರುವ ನಿಪಿ-11 ರಲ್ಲಿ ಏನು ವಿಚಾರ ಬರೆದಿದೆ ಎಂದು ನನಗೆ ತಿಳಿದಿರುವುದಿಲ್ಲ. ಈ ಪ್ರಕರಣದ ಕಡತದಲ್ಲಿರುವ ಧೃಡೀಕೃತ ಸ್ಥಳ ಮಹಜರ್ ಅನ್ನು ನಿಪಿ -3 ಎಂದು ಗುರುತಿಸಲಾಯಿತು. ಈ ಪ್ರಕರಣದ ನಿಪಿ -3 ರ ಸ್ಥಳ ಮಹಜರ್ ಅನ್ನು ಪೋಲೀಸರು ಸ್ಥಳದಲ್ಲಿಯೇ ಸಂಜೆ ದಿಃ04-04-2018 ರಂದು ಸಂಜೆ 01.00 ರಿಂದ 01.30 ಗಂಟೆಯವರೆಗೂ ಬರೆದುಕೊಂಡರು ಎಂದರೆ

ಸರಿಯಲ್ಲ. ಸದರಿ ಪಂಚನಾಮೆ ಬರೆಯುವ ಸಮಯದಲ್ಲಿ ಚಾಸಾ 5 ರವರು ಹಾಜರಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಕೃತ್ಯ ನಡೆದ ಸ್ಥಳವನ್ನು ಆರೋಪಿತರು ತೋರಿಸಿದರು ಎಂದರೆ ಸರಿಯಲ್ಲ.

ದಿಃ08-04-2018 ರಂದು ನಾನು ಸ್ವತ್ತು ಅಮಾನತ್ತು ಮಹಜರ್ ಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ಮೂಲ ದಾಖಲೆಯಲ್ಲಿರುವ ಸ್ಥಳ ಮಹಜರ್ ಅನ್ನು ತೋರಿಸಿ ಅದರಲ್ಲಿರುವ ಸಹಿಯ ಬಗ್ಗೆ ಕೇಳಲಾಗಿ ಸಾಕ್ಷಿಯು ಸದರಿ ಸಹಿಯನ್ನು ನೋಡಿ ಒಪ್ಪಿರುತ್ತಾರೆ. ಸದರಿ ಸಹಿ ಈಗಾಗಲೇ ನಿಪಿ-7(ಬಿ) ಎಂದು ಗುರುತಿಸಲಾಗಿರುತ್ತದೆ. ನನಗೆ ಸದರಿ ಮೂಲ ಕಡತದಲ್ಲಿರುವ ಈಗಾಗಲೇ ನಿಶಾನೆ ಗೊಂಡಿರುವ ನಿಪಿ-7 ರಲ್ಲಿ ಏನು ವಿಚಾರ ಬರೆದಿದೆ ಎಂದು ನನಗೆ ತಿಳಿದಿರುವುದಿಲ್ಲ. ಈ ಪ್ರಕರಣದ ಕಡತದಲ್ಲಿರುವ ಧೃಡೀಕೃತ ಸ್ವತ್ತು ಅಮಾನತ್ತು ಮಹಜರ್ ಅನ್ನು ನಿಪಿ -4 ಎಂದು ಗುರುತಿಸಲಾಯಿತು. ಈ ಪ್ರಕರಣದ ನಿಪಿ -4 ರ ಸ್ವತ್ತು ಅಮಾನತ್ತು ಮಹಜರ್ ಅನ್ನು ಪೋಲೀಸರು ಸ್ಥಳದಲ್ಲಿಯೇ ದಿಃ08-04-2018 ರಂದು ಬೆಳಗ್ಗೆ 09.00 ರಿಂದ 09.30 ಗಂಟೆಯವರೆಗೂ ಬರೆದುಕೊಂಡರು ಎಂದರೆ ಸರಿಯಲ್ಲ. ಸದರಿ ಪಂಚನಾಮೆ ಬರೆಯುವ ಸಮಯದಲ್ಲಿ ಚಾಸಾ 7 ಮತ್ತು ಚಾಸಾ 4 ರವರು ಹಾಜರಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಸಂದರ್ಭದಲ್ಲಿ 24 ಇಂಚಿನ ಎಲ್.ಜಿ. ಟಿ.ವಿಯನ್ನು ಆರೋಪಿತರ ಮಾಹಿತಿಯ ಮೇರೆಗೆ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ.

**:: ಪಾಟೀ ಸವಾಲು :: ಆರೋಪಿ ಪರ ಶ್ರೀ. KCC ವಕೀಲರಿಂದ ::ಇಲ್ಲ::**

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.

ಸಾಕ್ಷಿಯ ಸಹಿ::